INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -6, November--December, 2024,
PageNo,07- 16
Peer -Reviewed, Refereed Journal

# ಶಿವಮೊಗ್ಗ ಜಿಲ್ಲೆಯ ಐತಿಹಾಸಿಕ ಕೆರೆಗಳು

**ಡಾ.ಮಲ್ಲೇಶ.ಎಂ.**[1]

ಪ್ರಪಂಚದಲ್ಲಿ ನೀರಿಲ್ಲದೇ ಬದುಕುವುದು ಅಸಾಧ್ಯ. ನೀರು ಭೂಮಿಯ ಮೇಲೆ ಜೀವಿಸುವ ಎಲ್ಲರಿಗೂ ಅತ್ಯಂತ ಅತ್ಯಾವಶ್ಯಕ. ಮನುಷ್ಯ ಮತ್ತು ಪ್ರಾಣಿಗಳು ಆಹಾರವಿಲ್ಲದೆ ಬದುಕಬಹುದು, ಆದರೆ ನೀರಿಲ್ಲದೆ ಬದುಕಲು ಸಾಧ್ಯವಿಲ್ಲ. ಆದ್ದರಿಂದ ನೀರು ಎಲ್ಲಾ ವಸ್ತುಗಳಿಗಿಂತಲೂ ಶ್ರೇಷ್ಠ ವಾದದ್ದು ನೀರೇ, ಪ್ರಪಂಚದ ಎಲ್ಲಾ ಚರಾಚರಗಳಿಗೆ ಮೂಲ. ಶ್ರೇಷ್ಠನಾದ ಶಿವನ ಶಿರದ ಮೇಲೆ ಗಂಗೆ ಇರುವಳು, ಸಾಗರ ವಿಷ್ಣುವಿನ ಶಯನಸ್ಥಾನ, ಬ್ರಹ್ಮನ ಹುಟ್ಟು ನೀರಿನಿಂದ ಹುಟ್ಟಿದ ಕಮಲ, ಆದುದ್ದರಿಂದ ಎಲ್ಲಕ್ಕಿಂತ ನೀರೇ ಶ್ರೇಷ್ಠ. ಒಂದು ಅರವಟ್ಟಿಗೆ, ಒಂದು ಬಾವಿ, ಕೆರೆ, ಕಾಲುವೆ, ಅಥವಾ ಕಮಲಗಳಿಂದ ಕೂಡಿದ ಸರೋವರಗಳಿಂದ ಒದಗುವ ಶ್ರೇಯಸ್ಸು ಅಧಿಕ. ಏಕೆಂದರೆ ನೀರು ಪ್ರಪಂಚದ ಚರಾಚರ ಪ್ರಾಣಿಗಳನ್ನು ಸಲಹುತ್ತದೆ. ಆದ್ದರಿಂದ ಈ ಉತ್ತಮ ಕಾರ್ಯಕ್ಕೆ ದೊರಕುವ ಪುಣ್ಯ ಫಲವನ್ನು ಕಮಲೋದ್ಭವ ಬ್ರಹ್ಮನಿಂದಲೂ ಎಣಿಸಲಾಗದು.[1] ಇದರಿಂದ ನೀರಿನ ಮಹತ್ವ ಎಷ್ಟೆಂದು ತಿಳಿಯುತ್ತದೆ. “ದೇವರಿಗೆ ಸಲ್ಲಿಸುವ ಬಲಿದಾನ, ಪೂಜೆ ಮತ್ತು ಬ್ರಾಹ್ಮಣರಿಗೆ ನೀಡುವ ದಾನಗಳಿಗಿಂತ ಸಾರ್ವಜನಿಕರ ಸುಖ, ಶಾಂತಿ, ವಿಕಾಸಕ್ಕೆ ಮತ್ತು ಆರ್ಥಿಕ ಅಭ್ಯುದಯಕ್ಕೆ ನೆರವಾಗುವ ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದೇ ಹಿತಕಾರಿ.”[2] ಮನುಷ್ಯನು ಮುಕ್ತಿಯನ್ನು ಪಡೆಯಬೇಕಾದರೆ ಏಳು ಪುಣ್ಯ ಕೆಲಸಗಳಲ್ಲಿ ಕೆರೆಯನ್ನು ನಿರ್ಮಿಸುವುದು ಒಂದಾಗಿತ್ತು. ಏಳು ಪುಣ್ಯ ಕೆಲಸಗಳಲ್ಲಿ ಕೆರೆಯನ್ನು ನಿರ್ಮಾಣ ಮಾಡುವುದು ಎಲ್ಲಾ ಕೆಲಸಗಳಿಗಿಂತ ಅತ್ಯಂತ ಶ್ರೇಷ್ಠವಾದ ಕೆಲಸ ಎಂದು ನಂಬಿದ್ದರು. ಕೆರೆಗಳನ್ನು ಕಟ್ಟಿಸುವುದು ಮನುಷ್ಯನ ಬದುಕಿನ ಅಭಿವೃದ್ಧಿಗೆ ಮಾತ್ರ ಇರದೇ ಭೂಮಿಯ ಮೇಲೆ ವಾಸಿಸುವ ಎಲ್ಲಾ ಜಲಚರಗಳಿಗೂ ಮತ್ತು ಮರಗಿಡಗಳಿಗೆ ಉಪಯೋಗವಾಗಿತ್ತು. ಇದು ದೇವಸ್ಥಾನದ ಕಟ್ಟುವಿಕೆಯ ಕೆಲಸದಷ್ಟೇ ಪವಿತ್ರವಾದ ಕೆಲಸವೆಂದು ಪರಿಗಣಿಸಲಾಗಿತ್ತು. ಕೆರೆಗಳ ನಿರ್ಮಾಣ ಕಾರ್ಯದಿಂದ ತನಗಷ್ಟೇ ಅಲ್ಲದೇ ತನ್ನ ತಂದೆ ತಾಯಿಗಳಿಗೂ ಪುಣ್ಯ ದೊರೆಯುತ್ತದೆ. ಮೃತರ ಹಾಗೂ ಪಿತೃಗಳ ಆತ್ಮಕ್ಕೆ ಶಾಂತಿ ದೊರಕಿ ಮುಕ್ತಿ ದೊರೆಯುತ್ತದೆ.[3] ಎಂಬ ಪ್ರತೀತಿ ಇದೆ. ಜನನಿಯ ಹೆಸರಿನಲ್ಲಿ ಕೆರೆ ಮತ್ತು ಜನಕನ

[1] **.ಅತಿಥಿ ಉಪನ್ಯಾಸಕರು,ಇತಿಹಾಸ ವಿಭಾಗ, ವಿಶ್ವವಿದ್ಯಾಲಯ ಶ್ರೀಮದ್‌ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.**

ಹೆಸರಿನಲ್ಲಿ ದೇವಾಲಯ ನಿರ್ಮಿಸಿದ ಮನುಷ್ಯನ ಜೀವನ ಕೃತಾರ್ಥವಾಗುವುದು. ನೀರಾವರಿಯ ಯೋಜನ ಕಾರ್ಯಗಳಿಂದ ಜನತೆಯ ಆಧ್ಯಾತ್ಮಿಕ ಹಾಗೂ ಆರ್ಥಿಕ ವಿಕಾಸಕ್ಕೆ ಹೆಚ್ಚು ಸಹಕಾರಿಯಾಗಿ, ಮುಂದಿನ ಸಂತತಿಗೆ ಸಮೃದ್ಧಿ ಶಾಂತಿ ದೊರೆಯಬಹುದು. ಕೆರೆಗಳನ್ನು ಕಟ್ಟಿಸುವುದು ಮತ್ತು ದೇವಾಲಯಗಳನ್ನು ನಿರ್ಮಿಸುವುದರಿಂದ ಪುಣ್ಯ ದೊರೆಯುತ್ತದೆ.[4] ಎಂಬ ನಂಬಿಕೆ. ಕೆರೆಗಳನ್ನು ನಿರ್ಮಿಸುವುದರ ಉದ್ದೇಶದ ಹಿಂದೆ ಈ ಧಾರ್ಮಿಕ ಅಂಶಗಳು ಅಡಗಿದ್ದವು. ಇದರಿಂದ ಹೆಚ್ಚು ಹೆಚ್ಚು ಕೆರೆಗಳನ್ನು ನಿರ್ಮಿಸುವಲ್ಲಿ ಇವುಗಳು ಸಹಕಾರಿಯಾದವು. ಶಿವಮೊಗ್ಗ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ರಾಜವಂಶಗಳು ಆಳ್ವಿಕೆಯನ್ನು ನಡೆಸಿವೆ. ಹೀಗೆ ಆಳ್ವಿಕೆಯನ್ನು ಮಾಡಿದಂತಹ ರಾಜ ಮನೆತನಗಳು ಶಿವಮೊಗ್ಗ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ನೂರಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಅಂತಹ ಕೆರೆಗಳಲ್ಲಿ ಕೆಲವು ಶಾಸನೋಕ್ತ ಕೆರೆಗಳ ಅಧ್ಯಯನಗಳ ಮಾಹಿತಿಯನ್ನು ಈ ಲೇಖನದಲ್ಲಿ ತಿಳಿಸಿದ್ದೇನೆ. ಜಿಲ್ಲೆಯ ಸೊರಬ ತಾಲ್ಲೋಕಿನಲ್ಲಿ ಒಟ್ಟು 278 ಗ್ರಾಮಗಳಿಗೆ ಒಟ್ಟು 1187 ಕೆರೆಗಳಿವೆ. ಇದರಲ್ಲಿ ಶಾಸನೋಕ್ತವಾಗಿ ಸುಮಾರು 15 ಕೆರೆಗಳಿವೆ. ಈ ಕೆರೆಗಳಿಗೆ ಮಳೇಯೆ ಪ್ರಮುಖ ಮೂಲ. ವಾರ್ಷಿಕ ವರದಿ ಅನ್ವಯ ಇಲ್ಲಿ 1717 ಮೀ,ಮೀ ನಷ್ಟು ಮಳೆಯಾಗುತ್ತದೆ. ಈ ಪ್ರದೇಶ ಮಲೆನಾಡು ಹಾಗೂ ಅರೆ ಮಲೆನಾಡು ಪ್ರದೇಶಗಳಿಂದ ಕೂಡಿದ್ದು ,ಆರೆ ಮಲೆನಾಡು ಕಪ್ಪು ಎರೆ ಮತ್ತು ಮರಳು ಮಿಶ್ರ ಹಾಗೂ ಮಲೆನಾಡು ಜಂಬಿಟ್ಟಿಗೆ ಮತ್ತು ಮರಳು ಮಿಶ್ರ ಮಣ್ಣಿನಿಂದ ಕೂಡಿದೆ. ಪಶ್ಚಿಮ ದಿಕ್ಕು ಸಹ್ಯಾದ್ರಿ ಪರ್ವತ ಶ್ರೇಣೀಯ ಸೆರಗಿಗೆ ಅಂಟಿಕೊಂಡಿದ್ದು ಗುಡ್ಡ, ಕುರುಚಲು,ಅರಣ್ಯವನ್ನು ಹೊಂದಿದೆ. ಶಿಕಾರಿಪುರ ತಾಲ್ಲೋಕಿನಲ್ಲಿ ಒಟ್ಟು 156 ಗ್ರಾಮಗಳಿವೆ. ಇದರಲ್ಲಿ 10 ಕೆರೆಗಳು ಶಾಸನೋಕ್ತವಾಗಿವೆ. ಪ್ರಾಥಮಿಕ ಆಕರಗಳಾದ ಶಾಸನಗಳು ನಮಗೆ ನೈಜವಾದ ಮಾಹಿತಿಯನ್ನು ನೀಡುತ್ತವೆ. ಎಪಿಗ್ರಾಫಿಯ ಕರ್ನಾಟಿಕ ಸಂಪುಟ 7 ಮತ್ತು 8 ಶಿವಮೊಗ್ಗ ಜಿಲ್ಲೆ ಇದು ಅರಸರು ತಮ್ಮ ಕಾಲಾವಧಿಯಲ್ಲಿ ಹೊರಡಿಸಿದ ಅನೇಕ ಶಾಸನಗಳ ಬಗ್ಗೆ ಮಾಹಿತಿ ನಮಗೆ ದೊರಕಿಸಿ ಕೊಟ್ಟಿದೆ, ಅದರಲ್ಲಿನ ಮುಖ್ಯವಾದ ನೀರಾವರಿಯ ಮಾಹಿತಿಯನ್ನು ಈ ಕೃತಿಯು ಹೊಂದಿದೆ. ಕೆರೆಯನ್ನು ಕಟ್ಟಿಸಿದ, ದಾನ ನೀಡಿದ ಮತ್ತು ನೀರಾವರಿಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಈ ಶಾಸನ ಸಂಪುಟವು ನಮಗೆ ಒದಗಿಸುತ್ತದೆ. ಅಲ್ಲದೇ ಈ ಶಾಸನ ಸಂಪುಟವು ಅರಸರು ಕೃಷಿಗೆ, ನೀರಾವರಿಗೆ ತಮ್ಮ ಆಡಳಿತದ ಅವಧಿಯಲ್ಲಿ ಯಾವ ರೀತಿಯ ಪ್ರೋತ್ಸಾಹ ಮತ್ತು ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿದ್ದಾರೆಂಬ ಪ್ರಮುಖ ಮಾಹಿತಿಯನ್ನು ಈ ಕೃತಿಯು ನೀಡುತ್ತದೆ. ಒಟ್ಟಾರೆಯಾಗಿ ಈ ಶಾಸನ ಸಂಪುಟವು ಪ್ರಾಚೀನ ಅರಸರ ಕಾಲದ ನೀರಾವರಿಯ ಬಗ್ಗೆ ತಿಳಿಯಲು ನಮಗೆ ತುಂಬಾ ಉಪಯುಕ್ತವಾಗಿದೆ.

**01. ಕುಪ್ಪಗದ್ದೆ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಆನವಟ್ಟಿ ಮಾರ್ಗವಾಗಿ ಸಾಗುವಾಗ ಕುಪ್ಪಗದ್ದೆ ಗ್ರಾಮವು ಸಿಗುತ್ತದೆ. ಕುಪ್ಪಗದ್ದೆ ಕೆರೆಯು ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $13°52^{0}.41°$ ಇದ್ದರೆ ರೇಖಾಂಶವು : $75°13^{0}.51°$ ಇದೆ. ಇದರ ಏರಿಯು 669.99 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 6 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 40 ಎಕರೆ ಇದೆ. ಕ್ರಿ.ಶ 1278ರ ಯಕ್ಷಿ ಗ್ರಾಮದ ಶಾಸನ ಮಾಂಡಳೀಕ ಬದಕೀ ಸೆಟ್ಟಿ, ಕುಪ್ಪಗದ್ದೆಯ ಹೆಗ್ಗೆರೆ ಕೆಲಸಕ್ಕೆ ಯಕ್ಷಿ ಗ್ರಾಮದ ಜಮೀನನ್ನು ದಾನ ನೀಡಿದ್ದಾಗಿ (ಎಪಿಗ್ರಾಫಿಯ ಕರ್ನಾಟಿಕ ಸಂಪುಟ 7 ಶಿವಮೊಗ್ಗ ಜಿಲ್ಲೆ ಪುಟ ಸಂಖ್ಯೆ 359) ತಿಳಿಸುತ್ತದೆ. ಈ ಕೆರೆಯು ಹೊಯ್ಸಳರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಈ ಕೆರೆಗೆ ಮಳೆಯ ನೀರಿನಿಂದ ನೀರು ಸಂಗ್ರಹವಾಗುತ್ತದೆ. ಈ ಕೆರೆಯ ಏರಿಯ ಮೇಲೆ ರಾಮೇಶ್ವರ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ತೂಬಿನ ಮೇಲೆ 6ನೇ ಶತಮಾನದ ಲಿಪಿ ಇದೆ. ಈಗ ತೂಬು ಹಾಳಾಗುವ ಸ್ಥಿತಿಯಲ್ಲಿದೆ. ಮತ್ತು ಏರಿ ಇರುವ ಕಡೆ ಗಿಡ ಮರಗಳು ಅತಿಯಾಗಿ ಬೆಳೆದಿದ್ದು ಹೋಗಲು ಕಷ್ಟಕರವಾಗಿದೆ. ಅಲ್ಲದೇ ಈ ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈಗ ಈ ಕೆರೆಯನ್ನು ಒತ್ತುವರಿ ಮಾಡಲಾಗುತ್ತಿದೆ. ಪ್ರಸ್ತುತ ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳಿವೆ.

**02. ಕೊಡಕಣಿ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಶಿಕಾರಿಪುರ ಮಾರ್ಗವಾಗಿ ಸಾಗುವಾಗ ಕೊಡಕಣಿ ಕೆರೆಯು ಸಿಗುತ್ತದೆ. ಕೊಡಕಣಿ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14°22^{0}.26°$ ರೇಖಾಂಶವು : $75°07^{0}31°$ ಇದೆ. ಇದರ ಏರಿಯು 300.14 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 8 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 50 ಎಕರೆ ಇದೆ. ಈ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಇದನ್ನು ಪ್ರಸ್ತುತ ತುಂಬೋ ಹೊಂಡ ಎಂದು ಕರೆಯುತ್ತಾರೆ. ಈ ಕೆರೆಯ ಏರಿಯ ಮೇಲೆ ಭೂತಪ್ಪ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈಗ ತೂಬು ಹಾಳಾಗುವ ಸ್ಥಿತಿಯಲ್ಲಿದೆ. ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ಹತ್ತಿರ ಕಲ್ಯಾಣಿ ಚಾಲುಕ್ಯರಿಗೆ ಸೇರಿದ ಸ್ಮಾರಕ ಶಿಲ್ಪಗಳು ಮತ್ತು ವೀರಗಲ್ಲು ಇದೆ. ಈ ಕೆರೆಯು ಸರಪಳಿ ಕೆರೆಗಳ ರಚನೆಯ ಮಾದರಿಯನ್ನು ಒಳಗೊಂಡಿದೆ. ಈ ಕೆರೆಗೆ

ಮೇಲಿನ ಸಣ್ಣ ಕೆರೆಯಿಂದ ಕಾಲುವೆ ಮುಖಾಂತರ ನೀರು ಹರಿದು ಬರುತ್ತದೆ. ಇಲ್ಲಿ ಪ್ರತಿ ಶಿವರಾತ್ರಿಯ ದಿನ ದೀಪ ತೇಲಿ ಬಿಡುವುದು ಕೆರೆಯ ಆಚರಣೆಯಾಗಿದೆ. ಕೆರೆಯ ನೀರು ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ.

**03. ಓಟೂರು ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಶಿಕಾರಿಪುರ ಮಾರ್ಗವಾಗಿ ಸಾಗುವಾಗ ಕೊಡಕಣಿ ಗ್ರಾಮವು ಸಿಗುತ್ತದೆ. ಕೊಡಕಣಿ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14^{\circ}25^{0}.18^{\circ}$ ಇದ್ದರೆ ರೇಖಾಂಶವು : $75^{\circ}06^{0}.17^{\circ}$ ಇದೆ. ಇದರ ಏರಿಯು 423.36 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 6 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 40 ಎಕರೆ ಇದೆ. ಸುಮಾರು 11 ನೇ ಶತಮಾನದ ಓಟೂರಿನ ಒಂದು ಶಾಸನದಲ್ಲಿ ಓಟೂರಿನ ಗಾವುಂಡ, ಪ್ರಜೆಗಳು ಸೇರಿ ಕೆರೆಗೆ ದಾನಧರ್ಮ ಬಿಟ್ಟ ಉಲ್ಲೇಖವನ್ನು (ಎಪಿಗ್ರಾಫಿಯ ಕರ್ನಾಟಿಕ ಸಂಪುಟ, 8 ಸೊರಬ,ಪುಟ ಸಂಖ್ಯೆ 70 ) ತಿಳಿಸುತ್ತದೆ. ಈ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಈ ಕೆರೆಗೆ ಮಳೆಯ ನೀರಿನಿಂದ ನೀರು ಸಂಗ್ರಹವಾಗುತ್ತದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ನೀರು ಕೆರೆಯಿಂದ ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ.

**04. ನೆಲ್ಲೂರು ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಬನವಾಸಿ ಮಾರ್ಗವಾಗಿ ಸಾಗುವಾಗ ನೆಲ್ಲೂರು ಗ್ರಾಮವು ಸಿಗುತ್ತದೆ. ಈ ಗ್ರಾಮದ ಮೇಲಿನ ಗುಡ್ಡದ ಹತ್ತಿರ ಈ ಕೆರೆ ಇದೆ. ಈ ಕೆರೆಯ ಅಕ್ಷಾಂಶ : $14^{\circ}28^{0}.34^{\circ}$ ಇದ್ದರೆ ರೇಖಾಂಶವು : $74^{\circ}54^{0}.40^{\circ}$ ಇದೆ. ಇದರ ಏರಿಯು 145.33 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 8 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 50 ಎಕರೆ ಇದೆ. ಕ್ರಿ.ಶ 1012ರ ಶಾಸನ ಮಲೆಯರ ಕೆರೆಯಮ್ಮನ ಮಗ ಅಮ್ಮಣ ಗಾವುಂಡನ ಬಾವ ಮುದ್ದಯ್ಯ ಕೆರೆಯನ್ನು ಗಳಿಸಿದ ಉಲ್ಲೇಖವಿದೆ. (ಎಪಿಗ್ರಾಫಿಯ ಕರ್ನಾಟಿಕ ಸಂಪುಟ 7 ಶಿವಮೊಗ್ಗ ಜಿಲ್ಲೆ ) ತಿಳಿಸುತ್ತದೆ. ಇದು ಸ್ಥಳೀಯ ಇತಿಹಾಸಕಾರರ ಪ್ರಕಾರ ಈ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಇದನ್ನು ಕಲ್ಯಾಣಿ ಚಾಲುಕ್ಯರು ಜೀರ್ಣೋದ್ಧಾರ ಮಾಡಿದ್ದಾರೆ ಎಂಬುದಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ

ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ.

**05. ಮಾವಲಿ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಶಿರಾಳಕೊಪ್ಪ ಮಾರ್ಗವಾಗಿ ಸಾಗುವಾಗ ಮಾವಲಿ ಗ್ರಾಮವು ಸಿಗುತ್ತದೆ. ಈ ಗ್ರಾಮದ ಕೊನೆಯಲ್ಲಿ ಈ ಕೆರೆ ಇದೆ. ಮಾವಲಿ ಕೆರೆಯು ರಾಷ್ಟ್ರಕೂಟರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14°21^0.30°$ ಇದ್ದರೆ ರೇಖಾಂಶವು : $75°10^0.29°$ ಇದೆ. ಇದರ ಏರಿಯು 405.67 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 10 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 60 ಎಕರೆ ಇದೆ. ಕ್ರಿ.ಶ. 797ರ ಶಾಸನ ರಾಷ್ಟ್ರಕೂಟ ಮೂರನೇ ಗೋವಿಂದನ ಕಾಲದ್ದು ; ಸೊರಬ ತಾಲ್ಲೋಕು ಮಾವಲಿ ಗ್ರಾಮದಲ್ಲಿ ಮದನಾಗರಸ ಎಂಬುವನು ಕೆರೆಕಟ್ಟಿಸಿ, ಒಣ ಭೂಮಿಗೆ ನೀರು ಪೂರೈಕೆ ಮಾಡಿದಂತೆ ಹೇಳಲಾಗಿದ್ದು, ಆ ಕೆರೆಯನ್ನು ಗೋಳಿಕೆರೆ ಎಂದು ಹೆಸರಿಸಲಾಗಿದೆ. ಎಂದು (ಎಪಿಗ್ರಾಫಿಯ ಕರ್ನಾಟಿಕ ಸಂಪುಟ, 8 ಸೊರಬ,ಪುಟ ಸಂಖ್ಯೆ 328 ) ತಿಳಿಸುತ್ತದೆ. ಈ ಕೆರೆಯು ಮಳೆಯ ನೀರನ್ನು ಆಧರಿಸಿದೆ. ಈಗ ಈ ಕೆರೆಯ ಒತ್ತುವರಿಯಾಗುತ್ತಿದ್ದು ಅಳಿವಿನ ಅಂಚಿನಲ್ಲಿದೆ. ಇದರ ತೂಬು ಹಾಳಾಗಿದೆ. ಈ ಕೆರೆಯು ಸರಪಳಿ ಕೆರೆಗಳ ರಚನೆಯ ಮಾದರಿಯನ್ನು ಒಳಗೊಂಡಿದೆ. ಈ ಕೆರೆಗೆ ಮೇಲಿನ ಸಣ್ಣ ಎರಡು ಕೆರೆಗಳಿಂದ ಕಾಲುವೆ ಮುಖಾಂತರ ನೀರು ಹರಿದು ಬರುತ್ತದೆ. ಇಲ್ಲಿ ಪ್ರತಿ ಶಿವರಾತ್ರಿಯ ದಿನ ದೀಪ ತೇಲಿ ಬಿಡುವುದು ಈ ಕೆರೆಯ ಒಂದು ಆಚರಣೆಯಾಗಿದೆ. ಈ ಕೆರೆಯ ನೀರು ಕೆರೆಯಿಂದ ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ. ಈ ಕೆರೆಯ ಸುತ್ತಮುತ್ತ ಗಿಡಮರಗಳು ಬೆಳೆದು ಶಿಥಿಲಾವಸ್ಥೆಯಲ್ಲಿದೆ.

**06. ಬೀಳಾಗಿ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಉದ್ರಿ ಮಾರ್ಗವಾಗಿ ಸಾಗುವಾಗ ಮುಖ್ಯ ರಸ್ತೆಯ ಪಕ್ಕದಲ್ಲಿ ಬೀಳಾಗಿ ಕೆರೆ ಸಿಗುತ್ತದೆ. ಬೀಳಾಗಿ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14°24^0.14°$ ಇದ್ದರೆ ರೇಖಾಂಶವು : $75°06^0.45°$ ಇದೆ. ಇದರ ಏರಿಯು 382.66ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 4 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 20 ಎಕರೆ ಇದೆ. ಈ ಕೆರೆಯು ಸರಪಳಿ ಕೆರೆಗಳ ರಚನೆಯ ಮಾದರಿಯನ್ನು ಒಳಗೊಂಡಿದೆ. ಈ ಕೆರೆಗೆ ಮೇಲಿನ ಸಣ್ಣ ಎರಡು ಕೆರೆಗಳಿಂದ ಕಾಲುವೆ ಮುಖಾಂತರ ನೀರು ಹರಿದು ಬರುತ್ತದೆ. ಇದರ ತೂಬು ಹಾಳಾಗಿದೆ. ಈ ಕೆರೆಯನ್ನು ಅರಣ್ಯ ಇಲಾಖೆಯವರು ರಕ್ಷಿತ ಜೀವ ವೈವಿಧ್ಯ ರಕ್ಷಿತ ಕೆರೆ ಎಂದು ನಿರ್ಧರಿಸಿ ರಕ್ಷಣೆ ಕಾರ್ಯದಲ್ಲಿ ತೊಡಗಿದೆ.

**07. ಬೆನ್ನೂರು ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಚಂದ್ರಗುತ್ತಿಯಿಂದ ಬನವಾಸಿ ಮಾರ್ಗವಾಗಿ ಸಾಗುವಾಗ ಮುಖ್ಯರಸ್ತೆಯ ಪಕ್ಕದಲ್ಲೆ ಈ ಬೆನ್ನೂರು ಕೆರೆ ಸಿಗುತ್ತದೆ. ಬೆನ್ನೂರು ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14°28^{0}.10°$ ಇದ್ದರೆ ರೇಖಾಂಶವು : $74°58^{0}.23°$ ಇದೆ. ಇದರ ಏರಿಯು 402.93 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 5 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 50 ಎಕರೆ ಇದೆ. ಈ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಕ್ರಿ.ಶ. 1129ರ ಬೆನ್ನೂರು ಶಾಸನದಲ್ಲಿ ಬೆನ್ನೂರು ಕಾಳಗೌಡನ ಮಗ ಮಾಣಿಗಾವುಂಡ ಜಾಲಗೆರೆಯಿಂದ ಕಾಲುವೆ ತಂದು ಬಯಲನ್ನು ನೀರಾವರಿ ಮಾಡಿದ ಉಲ್ಲೇಖವಿದೆ. ಎಂದು (ಎಪಿಗ್ರಾಪಿಯ ಕರ್ನಾಟಿಕ ಸಂಪುಟ, 8 ಸೊರಬ,ಪುಟ ಸಂಖ್ಯೆ 153 ) ತಿಳಿಸುತ್ತದೆ. ಈ ಕೆರೆಗೆ ನೀರು ಮಳೆ ಮತ್ತು ಬೆಟ್ಟದಿಂದ ಇಳಿಯುವ ನೀರಿನಿಂದ ಸಂಗ್ರಹವಾಗುತ್ತದೆ. ಅಂದು ಈ ಕೆರೆಯ ನೀರನ್ನು ಕೃಷಿಗೆ ಮತ್ತು ಇನ್ನಿತರೆ ಉಪಯೋಗಗಳಿಗೆ ಉಪಯೋಗಿಸಲಾಗುತ್ತಿತ್ತು ಆದರೆ ಇಂದು ಕೃಷಿಗೆ ಮಾತ್ರ ಉಪಯೋಗವಾಗುತ್ತಿದೆ. ಈ ಕೆರೆಯ ಏರಿಯ ಮೇಲೆ ವೀರಾಂಜನೇಯ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈಗ ತೂಬು ಹಾಳಾಗುವ ಸ್ಥಿತಿಯಲ್ಲಿದೆ. ಈ ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಕೆರೆಯ ಹತ್ತಿರ ಸ್ಮಾರಕ ಶಿಲ್ಪಗಳು ಮತ್ತು ವೀರಗಲ್ಲು ಇದೆ.

**08. ಅಂಡಿಗೆ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಶಿರಾಳಕೊಪ್ಪ ಮಾರ್ಗವಾಗಿ ಸಾಗುವಾಗ ಅಂಡಿಗೆ ಗ್ರಾಮವು ಸಿಗುತ್ತದೆ.ಊರಿನ ಒಳಭಾಗದಲ್ಲಿ ಮುಖ್ಯರಸ್ತೆಯ ಪಕ್ಕದಲ್ಲೆ ಈ ಅಂಡಿಗೆ ಕೆರೆ ಸಿಗುತ್ತದೆ. ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ಕೆರೆಯ ಅಕ್ಷಾಂಶ : $14°22^{0}.17°$ ಇದ್ದರೆ ರೇಖಾಂಶವು : $75°09^{0}.14°$ ಇದೆ. ಇದರ ಏರಿಯು 728.96 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 8 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 40 ಎಕರೆ ಇದೆ. ಈ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಈ ಕೆರೆಗೆ ಮಳೆಯ ನೀರಿನಿಂದ ನೀರು ಸಂಗ್ರಹವಾಗುತ್ತದೆ. ಈ ಕೆರೆಯ ಏರಿಯ ಮೇಲೆ ಭೂತಪ್ಪ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈಗ ತೂಬು ಹಾಳಾಗುವ ಸ್ಥಿತಿಯಲ್ಲಿದೆ. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ಹತ್ತಿರ ಗಜಲಕ್ಷ್ಮೀ ಶಿಲ್ಪ, ಗಣಪತಿ ವಿಗ್ರಹ, ನಾಗಶಿಲ್ಪ, ಭೈರವಿ ಶಿಲ್ಪ ಮತ್ತು ವೀರಗಲ್ಲು ಇದೆ. ಈ ಕೆರೆಯು ಸರಪಳಿ ಕೆರೆಗಳ ರಚನೆಯ ಮಾದರಿಯನ್ನು

ಒಳಗೊಂಡಿದೆ. ಈ ಕೆರೆಗೆ ಮೇಲಿನ ಸಣ್ಣ ಎರಡು ಕೆರೆಗಳಿಂದ ಕಾಲುವೆ ಮುಖಾಂತರ ನೀರು ಹರಿದು ಬರುತ್ತದೆ. ಈ ಕೆರೆಯ ನೀರು ಕೆರೆಯಿಂದ ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ.

**09. ಹಿರಿಯಾವಲಿ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಶಿಕಾರಿಪುರ ಮಾರ್ಗವಾಗಿ ಸಾಗುವಾಗ ಹಿರಿಯಾವಲಿ ಕೆರೆ ಸಿಗುತ್ತದೆ. ಹಿರಿಯಾವಲಿ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ಕೆರೆಯಾಗಿದೆ. ಈ ಕೆರೆಯ ಅಕ್ಷಾಂಶ : 14°.24$^0$.02° ಇದ್ದರೆ ರೇಖಾಂಶವು : 75°.09$^0$.19° ಇದೆ. ಇದರ ಏರಿಯು 821.58 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 15 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 60 ಎಕರೆ ಇದೆ. ಈ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದ ಶಿವಮೊಗ್ಗ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಕ್ರಿ.ಶ 1151ರ ಹಿರಿಯಾವಲಿ ಶಾಸನ, ಮಾಂಡಳಿಕ ಮಾರಸಿಂಹ ಹಿರಿಯಾವಲಿ ಕೆರೆಯ ನೋಡಿ ಅದನ್ನು ಬಲಿಷ್ಠಗೊಳಿಸಲು ಕೆಲವು ಗಾವುಂಡರು ಕೂಡಿಕೊಂಡು ಇಬ್ಬರಿಗೆ ಭೂದಾನ ನೀಡಿದಂತೆ ಕಂಡುಬರುತ್ತದೆ. ಎಂದು (ಎಪಿಗ್ರಾಪಿಯ ಕರ್ನಾಟಿಕ ಸಂಪುಟ, 7 ಸೊರಬ,ಪುಟ ಸಂಖ್ಯೆ 235 ) ತಿಳಿಸುತ್ತದೆ. ಈ ಕೆರೆಗೆ ಮಳೆಯ ನೀರಿನಿಂದ ನೀರು ಸಂಗ್ರಹವಾಗುತ್ತದೆ. ಈ ಕೆರೆಯ ಏರಿಯ ಮೇಲೆ ಗಜಲಕ್ಷ್ಮೀಯ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ಹತ್ತಿರ ಸ್ಮಾರಕ ಶಿಲ್ಪಗಳು ಮತ್ತು ವೀರಗಲ್ಲು ಇದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಇಲ್ಲಿ ಪ್ರತಿ ಶಿವರಾತ್ರಿಯ ದಿನ ದೀಪ ತೇಲಿ ಬಿಡುವುದು ಕೆರೆಯ ಒಂದು ಆಚರಣೆಯಾಗಿದೆ. ಈ ಕೆರೆಯ ನೀರು ಕೆರೆಯಿಂದ ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ.

**10. ಕುಂಟಗಳಲೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಬನವಾಸಿ ಮಾರ್ಗವಾಗಿ ಸಾಗುವಾಗ ಹಲಸಿಯ ಹತ್ತಿರ ಕುಂಟಗಳಲೆ ಕೆರೆ ಈ ಗ್ರಾಮದ ಮೇಲಿನ ಗುಡ್ಡದ ಹತ್ತಿರ ಈ ಕೆರೆ ಇದೆ. ಈ ಕೆರೆಯ ಅಕ್ಷಾಂಶ : 14°29$^0$.30° ಇದ್ದರೆ ರೇಖಾಂಶವು : 74°53$^0$.37° ಇದೆ. ಇದರ ಏರಿಯು 223.08 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 3 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 20 ಎಕರೆ ಇದೆ. ಕ್ರಿ.ಶ 1112ರ ಕುಂಟಗಳಲೆ ಶಾಸನ ವೇಮಣ್ಣನೆಂಬುವನು ಹೋರಾಡಿ ಮಡಿದುದ್ದಾಕ್ಕಾಗಿ ಈತನ ಸಂಬಂಧಿ ಮಾರಸಿಂಗನ ಹೆಂಡತಿ ಹೆಲ್ಲಬ್ಬಿ ಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ. (ಎಪಿಗ್ರಾಪಿಯ ಕರ್ನಾಟಿಕ ಸಂಪುಟ 7 ಶಿವಮೊಗ್ಗ ಜಿಲ್ಲೆ ) ತಿಳಿಸುತ್ತದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು

ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಆದರೆ ಈಗ ಈ ಕೆರೆಯು ಕಾಣೆಯಾಗಿದ್ದು ಸಣ್ಣ ಕಾಲುವೆಯ ರೀತಿಯಲ್ಲಿ ಇರುವುದು ಮಾತ್ರ ನಮಗೆ ಕಾಣಿಸುತ್ತದೆ.

**11. ಕುಬಟೂರು ಕೆರೆ**

ಶಿವಮೊಗ್ಗ ಜಿಲ್ಲೆಯ ಆನವಟ್ಟಿಯಿಂದ ಹಾನಗಲ್ಲು ಮಾರ್ಗವಾಗಿ ಸಾಗುವಾಗ ಕುಬಟೂರು ಕೆರೆ ಸಿಗುತ್ತದೆ. ಈ ಕೆರೆಯ ಅಕ್ಷಾಂಶ : $14°34^{0}.02°$ ಇದ್ದರೆ ರೇಖಾಂಶವು : $75°08^{0}.27°$ ಇದೆ. ಇದರ ಏರಿಯು 1253.52 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 15 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 80 ಎಕರೆ ಇದೆ. ಕ್ರಿ.ಶ 1245ರ ಕುಬಟೂರು ಶಾಸನ ಬಾರಿಕರನ್ನು ಕುರಿತು ಉಲ್ಲೇಖವಿದೆ. (ಎಪಿಗ್ರಾಪಿಯ ಕರ್ನಾಟಿಕ ಸಂಪುಟ 7 ಶಿವಮೊಗ್ಗ ಜಿಲ್ಲೆ ಪುಟ ಸಂಖ್ಯೆ 89) ತಿಳಿಸುತ್ತದೆ. ಇದು ಸ್ಥಳೀಯ ಇತಿಹಾಸಕಾರರ ಪ್ರಕಾರ ಈ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಇದನ್ನು ಕಲ್ಯಾಣಿಚಾಲುಕ್ಯರು ಜೀರ್ಣೋದ್ಧಾರ ಮಾಡಿದ್ದಾರೆ ಎಂಬುದಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಕೆರೆಯ ಏರಿಯ ಮೇಲೆ ಸೋಮೇಶ್ವರ ದೇವಾಲಯವಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ.

**12. ತವನಂದಿ ಕೆರೆ**

ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಬನವಾಸಿ ಮಾರ್ಗವಾಗಿ ಸಾಗುವಾಗ ತವನಂದಿ ಗ್ರಾಮವು ಸಿಗುತ್ತದೆ. ಈ ಗ್ರಾಮದ ಮೇಲಿನ ಗುಡ್ಡದ ಹತ್ತಿರ ಈ ಕೆರೆ ಇದೆ. ಈ ಕೆರೆಯ ಅಕ್ಷಾಂಶ : $14°26^{0}.29°$ ಇದ್ದರೆ ರೇಖಾಂಶವು : $74°04^{0}.25°$ ಇದೆ. ಇದರ ಏರಿಯು 404.55 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 10 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 40 ಎಕರೆ ಇದೆ. ಇದು ಸ್ಥಳೀಯ ಇತಿಹಾಸಕಾರರ ಪ್ರಕಾರ ಈ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಇದನ್ನು ಕಲ್ಯಾಣಿ ಚಾಲುಕ್ಯರು ಜೀರ್ಣೋದ್ಧಾರ ಮಾಡಿದ್ದಾರೆ ಎಂಬುದಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈಗ ಈ ತೂಬು ಹಾಳಾಗುವ ಸ್ಥಿತಿಯಲ್ಲಿದೆ.

**13. ತಾಳಗುಂದ ಕೆರೆ**

ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದಿಂದ ಹಾವೇರಿ ಮಾರ್ಗವಾಗಿ ಸಾಗುವಾಗ ತಾಳಗುಂದ ಕೆರೆ ಸಿಗುತ್ತದೆ. ಈ ಗ್ರಾಮದ ಪ್ರಣವೇಶ್ವರ ದೇವಾಲಯದ ಈ ಕೆರೆ ಇದೆ. ಈ ಕೆರೆಯ ಅಕ್ಷಾಂಶ : $14^{\circ}25^{0}.43^{\circ}$ ಇದ್ದರೆ ರೇಖಾಂಶವು : $75^{\circ}15^{0}.41^{\circ}$ ಇದೆ. ಇದರ ಏರಿಯು 1567.04 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 10 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 50 ಎಕರೆ ಇದೆ. ಕ್ರಿ.ಶ 1108ರ ತಾಳಗುಂದ ಶಾಸನ ಇಮ್ಮಡಿ ತೈಲಪನ ಕಾಲದ್ದು. ಕಾಮದತ್ತಿ, ತಂದೆ ಮಾಧವಭಟ್ಟ, ತಾಯಿ ಜಾನಕಿ, ಗೌರಿಯತ್ತೆ, ಸೋಡ್ಡಲನನುಜ, ದಂಡನಾಯಕ ಗೋವಿಂದರಸನ ಮೈದುನ ಪೃಥ್ವಿಧರ, ತ್ರಿವಳಿ ಭಟ್ಟರು ತಾಳಗುಂದದಲ್ಲಿ ಪೆರ್ಗಡೆಯಾಗಿದ್ದಾಗ ಧರ್ಮಪ್ರಸಂಗವಾಗಿ ಕೆರೆಯನ್ನು ಆಗಲಿಸಿ, ನೀರು ಪಡೆದು, ದೇಗುಲ ಕಟ್ಟಿಸಿ, ನೀರೆರೆವಮಾಣಿಗೆ, ಕೆರೆಪಡಿ ಸಲ್ಲಿಸುವುದಕ್ಕೆ ಬಿಟ್ಟ ದಾನದ ಉಲ್ಲೇಖವಿದೆ. ಎಂದು (ಎಪಿಗ್ರಾಪಿಯ ಕರ್ನಾಟಿಕ ಸಂಪುಟ 8 ಶಿವಮೊಗ್ಗ ಜಿಲ್ಲೆ ಪುಟ ಸಂಖ್ಯೆ 384) ತಿಳಿಸುತ್ತದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ. ಈ ಕೆರೆಯ ನೀರು ಕೆರೆಯಿಂದ ಕೃಷಿಗೆ ಕಾಲುವೆ ಮೂಲಕ ಹರಿಯುತ್ತದೆ.

**14. ಸಾಲೂರು ಕೆರೆ**

ಶಿವಮೊಗ್ಗ ಜಿಲ್ಲೆಯಿಂದ ಶಿಕಾರಿಪುರ ಮಾರ್ಗವಾಗಿ ಸಾಗುವಾಗ ಸಾಲೂರು ಕೆರೆ ಸಿಗುತ್ತದೆ. ಈ ಕೆರೆಯ ಅಕ್ಷಾಂಶ : $14^{\circ}21^{0}.80^{\circ}$ ಇದ್ದರೆ ರೇಖಾಂಶವು : $75^{\circ}30^{0}.46^{\circ}$ ಇದೆ. ಕೆರೆಯ ವಿಸ್ತೀರ್ಣ ಸುಮಾರು 6 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 30 ಎಕರೆ ಇದೆ. ಈ ಕೆರೆಯು ಸಾಂತರಸರ ಕಾಲಕ್ಕೆ ಸೇರಿದ್ದಾಗಿದೆ. ಕ್ರಿ.ಶ 953ರ ಸಾಲೂರು ಶಾಸನದಲ್ಲಿ ಚಂದಿಗರಸ ಕೆರೆ ಕಟ್ಟಿಸಿದ್ದನ್ನು ಉಲ್ಲೇಖಿಸಿದೆ. ಈ ಕೆರೆಗೆ ಚಂದಿಗೆರೆ ಎಂದು ಕರೆಯುತ್ತಾರೆ. ಎಂದು (ಟ್ಯಾಂಕ್ ಇರೀಗೇಶನ್ ಇನ್ ಕರ್ನಾಟಕ ಪುಟ ಸಂಖ್ಯೆ 43) ತಿಳಿಸುತ್ತದೆ. ಈ ಕೆರೆಯ ತೂಬು ಪ್ರಸ್ತುತ ಹಾಳಾಗಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ.

**15. ಹಿರೇಚೌಟಿ ಕೆರೆ.**

ಶಿವಮೊಗ್ಗ ಜಿಲ್ಲೆಯ ಸೊರಬದ ಹತ್ತಿರವಿದೆ. ಈ ಕೆರೆಯ ಅಕ್ಷಾಂಶ :$14^{\circ}28^{0}.34^{\circ}$ ಇದ್ದರೆ ರೇಖಾಂಶವು :$74^{\circ}54^{0}.40^{\circ}$ ಇದೆ. ಇದರ ಏರಿಯು 145.33 ಮೀಟರ್ ಉದ್ದವಿದೆ. ಕೆರೆಯ ವಿಸ್ತೀರ್ಣ 8 ಎಕರೆ ಇದೆ. ಇದರ ಅಚ್ಚುಕಟ್ಟು ಪ್ರದೇಶ ಸುಮಾರು 50 ಎಕರೆ ಇದೆ. ಕ್ರಿ.ಶ 1221ರ ಹಿರೇಚೌಟಿ ಶಾಸನ

ಬಂದಳಿಕೆ, ಭೋಮ್ಮದೇವರಸನ ಕಾಲದಲ್ಲಿ ರೇವಣ್ಣನೆಂಬಾತ ಕಲಿದೇವರ ಜೀರ್ಣೋದ್ದಾರ ಹಾಗೂ ಕೆರೆಯನ್ನು ಆಗಲಿಸಲು ಭೂಧಾನ ನೀಡಿದ ವಿಚಾರವಿದೆ. ಎಂದು (ಎಮ್,ಎ, ಆರ್. 1972 ಪುಟ ಸಂಖ್ಯೆ 158 ) ತೀಳಿಸುತ್ತದೆ. ಇದು ಸ್ಥಳೀಯ ಇತಿಹಾಸಕಾರರ ಪ್ರಕಾರ ಈ ಕೆರೆಯು ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಪ್ರಮುಖ ನೀರಾವರಿಯ ಮೂಲವಾಗಿದೆ. ಇದನ್ನು ಕಲ್ಯಾಣಿ ಚಾಲುಕ್ಯರು ಜೀರ್ಣೋದ್ಧಾರ ಮಾಡಿದ್ದಾರೆ ಎಂಬುದಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಕೆರೆಯ ತೂಬಿನ ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ,ತೆಂಗು,ಬಾಳೆ, ತೋಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ಕಾಣಬಹುದು. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ.

**ಅಡಿಟಿಪ್ಪಣಿಗಳು**

1.EP Ind Vol-XIV- Page-107, 108

2.ಧೃವನಾರಾಯಣ ಎಂ.(ಅನು)., 2001, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪು.ಸಂ–36

3.ಅದೇ., ಪು.ಸಂ–45

4.ಅದೇ., ಪು.ಸಂ–45

**ಗ್ರಂಥಗಳ ಪರಾಮರ್ಶನ**

1. ಅಭಿಶಂಕರ್, ಜಿಲ್ಲಾ ಗೆಜೆಟಿಯರ್. ಶಿವಮೊಗ್ಗ ಜಿಲ್ಲೆ

2. ಖಂಡೋಬರಾವ್, 2015, “ಅಮೂಲ್ಯ ಶಿಮೊಗೆ, ಮಗರ್ ಪಬ್ಲಿಕೇಷನ್ಸ್ ಶಿವಮೊಗ್ಗ”

3. ಗೋಪಾಲ್. ಆರ್. 2008 “ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ” ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಮೈಸೂರು.

4. ರೈಸ್, ಬಿ.ಎಲ್, 1894 “ಎಫಿಗ್ರಾಫಿಯ ಕರ್ನಾಟಿಕ”ಸಂಪುಟ–7 ಮತ್ತು 8, ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು.

5. ರಾಜರಾಮ್ ಹೆಗಡೆ, 2002, “ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ” ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ